ನಿಮ್ಮೊಡನೆ

# ಬೀದಿಬದಿಯ ವ್ಯಾಪಾರ

ಹೊಸ ನಿಯಮಾವಳಿಗಳನ್ನು ರೂಪಿಸಿ, ಲೈಸೆನ್ಸ್ ಪದ್ಧತಿ ತಂದಾಕ್ಷಣ ಎಲ್ಲವೂ ಸರಿಯಾಗುತ್ತದೆ ಎಂದುಕೊಳ್ಳುವುದೂ ತಪ್ಪು. ‘ಬೀದಿವ್ಯಾಪಾರ ಎನ್ನುವುದು ಒಂದು ಕಲೆಯೂ ಹೌದು; ನಗರದ ಸೌಂದರ್ಯವೂ ಹೌದು’ ಎನ್ನುವಂತೆ ವ್ಯವಸ್ಥೆಯನ್ನು ಪುನರ್ರೂಪಿಸಬೇಕಿದೆ.

ಫುಟ್‌ಪಾತ್‌ಗಳಲ್ಲಿ ವ್ಯಾಪಾರ ಆಧುನಿಕ ಜೀವನಶೈಲಿಯ ಒಂದು ಭಾಗವೇ ಆಗಿಹೋಗಿದೆ. ಜಗತ್ತಿನ ಎಲ್ಲ ದೇಶಗಳಲ್ಲೂ, ಅದೆಷ್ಟೇ ಮುಂದುವರಿದಿದ್ದರೂ ಫುಟ್‌ಪಾತ್ ವ್ಯಾಪಾರವನ್ನು ತಪ್ಪಿಸುವುದು ಆಗಿಲ್ಲ. ಆದರೆ ನಾಗರಿಕ ಪ್ರಜ್ಞೆ ಅತ್ಯಂತ ಹೆಚ್ಚಿನ ಮಟ್ಟದಲ್ಲಿರುವ ದೇಶಗಳಲ್ಲಿ ಫುಟ್‌ಪಾತ್ ವ್ಯಾಪಾರವನ್ನು ವ್ಯವಸ್ಥಿತವಾಗಿ ರೂಪಿಸಿದ ಉದಾಹರಣೆಗಳಿವೆ. ನಮ್ಮ ದೇಶದಲ್ಲಿ ನಾಗರಿಕ ಪ್ರಜ್ಞೆಯ ಮಟ್ಟ ತೀರಾ ಕಡಿಮೆ ಇರುವುದರಿಂದ ಫುಟ್‌ಪಾತ್ ವ್ಯಾಪಾರ, ಗ್ರಾಹಕರ ಸಂತೋಷವನ್ನು ಹೆಚ್ಚಿಸುವ ಬದಲು ತಲೆನೋವನ್ನು ಹೆಚ್ಚಿಸುತ್ತಿದೆ. ಜತೆಗೆ ಆಡಳಿತ ನಡೆಸುವವರಿಗೂ ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆ. ಈ ಹಿನ್ನೆಲೆಯಲ್ಲೇ ರಾಜ್ಯ ಸರ್ಕಾರವು ಫುಟ್‌ಪಾತ್ ವ್ಯಾಪಾರವನ್ನು ನಿಯಮಬದ್ಧಗೊಳಿಸಲು ಹೊರಟಿದೆ. ನಗರಾಭಿವೃದ್ಧಿ ಇಲಾಖೆಯು ಫುಟ್‌ಪಾತ್ ವ್ಯಾಪಾರವನ್ನು ಜನಸ್ನೇಹಿಯಾಗಿಸಲು ಮತ್ತು ಫುಟ್‌ಪಾತ್ ವ್ಯಾಪಾರಿಗಳಿಗೂ ಸಾಮಾಜಿಕ ಭದ್ರತೆ ಒದಗಿಸಲು ಹೊಸ ಕರಡು ನಿಯಮಾವಳಿಗಳನ್ನು ರೂಪಿಸಿದೆ. ಬೆಳೆಯುತ್ತಿರುವ ನಗರಗಳ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಇದೊಂದು ಮಹತ್ವದ ಕ್ರಮ. ಈ ಕರಡು ಪ್ರಕಾರ, ಸ್ಥಳೀಯ ನಗರಾಡಳಿತ ಸಂಸ್ಥೆಗಳಲ್ಲಿ ‘ಟೌನ್ ವೆಂಡಿಂಗ್ ಕಮಿಟಿ’ಗಳು ಅಸ್ತಿತ್ವಕ್ಕೆ ಬರಲಿವೆ. ಫುಟ್‌ಪಾತ್ ವ್ಯಾಪಾರಿಗಳಿಗೆ ಸ್ಥಳ ನಿಗದಿ ಪಡಿಸುವುದರಿಂದ ಹಿಡಿದು ಅವರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸುವವರೆಗೆ ಎಲ್ಲವನ್ನೂ ಈ ಕಮಿಟಿಗಳು ನೋಡಿಕೊಳ್ಳಲಿವೆ.

ಭಾರತದಲ್ಲಿ ಸುಮಾರು ಒಂದು ಕೋಟಿ ಜನ ಬೀದಿವ್ಯಾಪಾರಿಗಳಿದ್ದಾರೆ ಎನ್ನುವುದು ಒಂದು ಅಂದಾಜು. ಮುಂಬೈಯಲ್ಲಿ ಇವರ ಸಂಖ್ಯೆ 25 ಲಕ್ಷ ಇದ್ದರೆ, ದೆಹಲಿಯಲ್ಲಿ 20 ಲಕ್ಷ. ಬೆಂಗಳೂರಿನಲ್ಲೂ ದೊಡ್ಡ ಸಂಖ್ಯೆಯಲ್ಲಿ ಬೀದಿಬದಿ ವ್ಯಾಪಾರಿಗಳಿದ್ದಾರೆ. ರಾಜ್ಯದ ಬಹುತೇಕ ನಗರಗಳಲ್ಲಿ ಫುಟ್‌ಪಾತ್ ಗಾಡಿಗಳಲ್ಲಿ ತಿಂಡಿ ತಿನ್ನುವವರ, ಊಟ ಮಾಡುವವರ ಸಂಖ್ಯೆ ಗಮನಾರ್ಹ ಪ್ರಮಾಣದಲ್ಲಿದೆ. ಹೀಗೆ ಬೀದಿಬದಿ ತಿಂಡಿ ತಿನ್ನುವುದು ಮೋಹವೂ ಹೌದು, ಫ್ಯಾಷನ್ನೂ ಹೌದು! ಭಾರತೀಯರ ರುಚಿಗ್ರಂಥಿಗಳ ಸಾಮರ್ಥ್ಯ ಅಗಾಧವಾದದ್ದು. ಹಾಗಾಗಿ ಫುಟ್‌ಪಾತ್ ವ್ಯಾಪಾರ ಕೋಟಿಗಟ್ಟಳೆ ರೂಪಾಯಿ ಮೌಲ್ಯದ ವಹಿವಾಟಾಗಿ ಬೆಳೆದುನಿಂತಿದೆ. ಜತೆಗೆ ಪೊಲೀಸರಿಗೂ, ರೌಡಿಗಳಿಗೂ ‘ಅಡ್ಡಸಂಪಾದನೆ’ಯ ಸುಲಭ ದಾರಿಯೂ ಆಗಿದೆ. ಸಾಮಾನ್ಯವಾಗಿ ನಗರಗಳಿಗೆ ಬರುವ ವಲಸಿಗರು, ಅಂಗಡಿಗಳ ಮೇಲೆ ದೊಡ್ಡ ಬಂಡವಾಳ ತೊಡಗಿಸಲು ದುಡ್ಡಿಲ್ಲದ ಬಡವರು, ಸಂಘಟಿತ ವಲಯದಲ್ಲಿ ಕೆಲಸ ಕಳೆದುಕೊಂಡವರು, ಅಸಹಾಯಕರು– ಫುಟ್‌ಪಾತ್ ವ್ಯಾಪಾರವನ್ನು ಆರಂಭಿಸುತ್ತಾರೆ. ತಳ್ಳುವ ಗಾಡಿಗೋ, ಸಣ್ಣ ಪುಟ್ಟ ಪರಿಕರಗಳಿಗೋ ದುಡ್ಡು ಹೊಂದಿಸಿದರೆ ಸಾಕು– ಜೀವನಕ್ಕೆ ಒಂದು ಆಧಾರವಾಗುತ್ತದೆ ಎನ್ನುವುದು ಈ ಜನರ ಕನಸು. ಇಲ್ಲಿ ಗ್ರಾಹಕರಿಗೂ ಲಾಭವಿದೆ. ಸಮಯ ಮತ್ತು ದುಡ್ಡು ಉಳಿಯುತ್ತದೆ.

ಹಾಗೆಂದು ಹೊಸ ನಿಯಮಾವಳಿಗಳನ್ನು ರೂಪಿಸಿ, ಲೈಸೆನ್ಸ್ ಪದ್ಧತಿ ತಂದಾಕ್ಷಣ ಎಲ್ಲವೂ ಸರಿಯಾಗುತ್ತದೆ ಎಂದುಕೊಳ್ಳುವುದೂ ತಪ್ಪು. ಎಷ್ಟು ಮಂದಿಗೆ ಲೈಸೆನ್ಸ್ ನೀಡುತ್ತೀರಿ? ಅಷ್ಟು ಸ್ಥಳ ನಗರದ ರಸ್ತೆ ಬದಿಗಳಲ್ಲಿ ಇದೆಯಾ? ಹೀಗೆ ಲೈಸೆನ್ಸ್ ಕೊಟ್ಟು ಫುಟ್‌ಪಾತ್‌ಗಳಲ್ಲಿ ಸಣ್ಣ ವ್ಯಾಪಾರಿಗಳನ್ನು ಕೂರಿಸಿದರೆ, ಹೆಚ್ಚು ಬಾಡಿಗೆ ಕೊಟ್ಟು ಮಳಿಗೆಗಳನ್ನು ನಡೆಸುತ್ತಿರುವ ಸಂಘಟಿತ ವ್ಯಾಪಾರಿಗಳಿಗೆ ಅನ್ಯಾಯ ಆಗುವುದಿಲ್ಲವೆ? ಮುಂತಾದ ಪ್ರಶ್ನೆಗಳಿಗೂ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ನಿಜ, ಬಹುತೇಕ ತಳ್ಳುಗಾಡಿಗಳಲ್ಲಿ ಆಹಾರ ವಸ್ತುಗಳನ್ನು ಮಾರುವವರು ಆರೋಗ್ಯಸೂತ್ರಗಳ ಕಡೆಗೆ ಗಮನ ಕೊಡುವುದಿಲ್ಲ. ಶುದ್ಧನೀರು ಕೂಡಾ ಇಟ್ಟಿರುವುದಿಲ್ಲ. ಫುಟ್‌ಪಾತ್‌ನಲ್ಲಿ ವಸ್ತುಗಳನ್ನು ರಾಶಿ ಹಾಕಿಕೊಂಡು ಕುಳಿತುಕೊಳ್ಳುವವರಿಂದಾಗಿ ಪಾದಚಾರಿಗಳು ರಸ್ತೆಯಲ್ಲೇ ನಡೆಯಬೇಕಾಗುತ್ತದೆ. ಅವುಗಳನ್ನೆಲ್ಲ ನಿಯಂತ್ರಿಸಲೇಬೇಕು. ಆದರೆ ಲೈಸೆನ್ಸ್ ಹೆಸರಿನಲ್ಲಿ ನಿಯಂತ್ರಣ ಹೆಚ್ಚಾದರೆ, ವ್ಯಾಪಾರಿಗಳ ಲಾಭ ಕಡಿಮೆಯಾಗುತ್ತದೆ. ಜತೆಗೆ ಲೈಸೆನ್ಸ್ ಇಲ್ಲದೆ ವ್ಯಾಪಾರ ಮಾಡುವವರ ಸಂಖ್ಯೆ ಹೆಚ್ಚಾಗುತ್ತದೆ. (ಮುಂಬೈಯಲ್ಲಿ 25 ಲಕ್ಷ ಮಂದಿ ಬೀದಿಬದಿ ವ್ಯಾಪಾರಿಗಳಲ್ಲಿ ಲೈಸೆನ್ಸ್ ಇರುವವರು 14 ಸಾವಿರ ಮಾತ್ರ!)

ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಹೊಸ ಕಾಯ್ದೆ ಹೆಚ್ಚು ಪ್ರಾಯೋಗಿಕ ಚಿಂತನೆಗಳನ್ನು ಮಾಡಬೇಕಿದೆ. ‘ಬೀದಿವ್ಯಾಪಾರ ಎನ್ನುವುದು ಒಂದು ಕಲೆಯೂ ಹೌದು; ನಗರದ ಸೌಂದರ್ಯವೂ ಹೌದು’ ಎನ್ನುವಂತೆ ವ್ಯವಸ್ಥೆಯನ್ನು ಪುನರ್ರೂಪಿಸಬೇಕಿದೆ. ನಮ್ಮ ಲಂಚ, ರುಷುವತ್ತುಗಳ ಪದ್ಧತಿಯಲ್ಲಿ, ಇಕ್ಕಟ್ಟಾದ ಗಲ್ಲಿಗಳಲ್ಲಿ, ಅಗಲ ಕಿರಿದಾದ ಫುಟ್‌ಪಾತ್‌ಗಳಲ್ಲಿ ಇವೆಲ್ಲ ಸಾಧ್ಯವೆ?

■ ಬಿ.ಎಂ.ಹನೀಫ್

